ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢ ಶಾಲಾ ಶಿಕ್ಷಕರಾಗಿ ಬಡ್ತಿ

ಶ್ರೀ ಮನೋಹರ ಐನಾಪೂರ : ಮಾನ್ಯ ಅಧ್ಯಕ್ಷಿಣಿಯವರೆ, ಪದವೀಧರ ತರಬೇತಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢಶಾಲಾ ಸಹಾಯಕರ ಶಿಕ್ಷಕರ ಹುದ್ದೆಗೆ ಪದೋನ್ನತಿ (ಬಡ್ತಿ) ಕೊಡುವ ನಿಯಮವು ಜಾರಿಯಲ್ಲಿರುವುದು ನಿಜವೆ? ಹಾಗಿದ್ದರೆ ಈ ಬಡ್ತಿ ನೀಡುವ ಸಂಬಂಧಗಳಲ್ಲಿ ರೋಸ್ಟರ್ ನಿಯಮವನ್ನು ಪಾಲಿಸಲಾಗುತ್ತಿದೆಯೇ? ಇಲ್ಲದಿದ್ದರೆ ಇದಕ್ಕೆ ಕಾರಣಗಳೇನು? ರೋಸ್ಟರ್ ನಿಯಮಗಳನ್ನು ಎಂದಿನಿಂದ ಜಾರಿಗೆ ತರಲಾಗುವುದು?

ಶ್ರೀ ಎಂ. ವೀರಪ್ಪಮೊಯಿಲಿ : (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷಿಣಿಯವರೆ, ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಜೇಷ್ಠತಾ ಪಟ್ಟಿಯನ್ನು ವಿಭಾಗ ಮಟ್ಟದಲ್ಲಿ ವಿಭಾಗೀಯ ಸಹ ನಿರ್ದೇಶಕರುಗಳು ತಯಾರಿಸಿ ಬಡ್ತಿಗೆ ಮೀಸಲಿರುವ ಶೇಕಡ 25ರಷ್ಟು ಬಡ್ತಿಯನ್ನು ಅವರ ಜೇಷ್ಠತೆ ಹಾಗೂ ವಿದ್ಯಾರ್ಹತೆ ಮೇಲೆ ಪ್ರೌಢ ಶಾಲಾ ಶಿಕ್ಷಕರಾಗಿ ಬಡ್ತಿ ನೀಡಲಾಗುತ್ತಿದೆ.

ಈ ಬಡ್ತಿಗಳನ್ನು ನೀಡುವಾಗ ರೋಸ್ಟರ್ ಪದ್ಧತಿಯನ್ನು ಪಾಲಿಸಲಾಗುತ್ತಿಲ್ಲ. ಏಕೆಂದರೆ, ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 29 ಎಸ್‌ಪಿಸಿ 77 ದಿನಾಂಕ 27-4-78ರ ಪ್ರಕಾರ ನೇರವಾಗಿ ನೇಮಕಾತಿಯು ಶೇಕಡಾ $66\frac{2}{3}$ ಹುದ್ದೆಗಳನ್ನು ಮಾಡುವಾಗ ಮಾತ್ರ, ಉಳಿದ ಶೇಕಡಾ $33\frac{1}{3}$ ಹುದ್ದೆಗಳಿಗೆ ರೋಸ್ಟರ್ ಪದ್ಧತಿಯನ್ನು ಪಾಲಿಸಬೇಕಾಗುತ್ತದೆ. ಆದರೆ ಪ್ರಸ್ತುತ ನೇಮಕಾತಿಗಳಲ್ಲಿ ನೇರ ನೇಮಕಾತಿ ಶೇಕಡಾ 75ರಷ್ಟು ಇದ್ದು, ಉಳಿದ ಶೇಕಡಾ 25ರ ಅಂಶವನ್ನು ಮಾತ್ರ ಬಡ್ತಿಯಿಂದ ತುಂಬಲಾಗುತ್ತಿರುವುದರಿಂದ ಸರ್ಕಾರಿ ಆದೇಶದ ಪ್ರಕಾರ ಈ ಹುದ್ದೆಗಳಿಗೆ ರೋಸ್ಟರ್ ಪದ್ಧತಿಯನ್ನು ಅನ್ವಯಿಸಲು ಬರುವುದಿಲ್ಲ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

+ ಶ್ರೀ ಸಿ. ಬೈರೇಗೌಡ (ವೇಮಗಲ್) ಸನ್ಮಾನ್ಯ ಅಧ್ಯಕ್ಷಿಣಿಯವರೆ, ನಾನು ಶುಕ್ರವಾರ ಎನ್‌ಜಿಇಎಫ್ ಕಾರ್ಖಾನೆಯಲ್ಲಿ ನಡೆದಿರತಕ್ಕ ಕೆಲವು ವಿಚಾರಗಳ ಬಗ್ಗೆ ಮಾತನಾಡುತ್ತಿದ್ದೆ. ಕಾಸ್ಟ್ ಆಫ್ ಟ್ರೈನಿಂಗ್ ಚಾಪ್ಟರ್‌ನಲ್ಲಿ ಪುಟ-45ರಲ್ಲಿ ಓದುತ್ತಿದ್ದೆ. ವೇಳೆಯ ಅಭಾವದಿಂದ ಅಷ್ಟನ್ನೂ ಓದುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತ್ರ ಹೇಳುತ್ತೇನೆ. ಕಮಿಟಿಯವರು ಏನು ರೆಕ್‌ಮೆಂಡ್ ಮಾಡಿದ್ದಾರೆ ಅದರ ಬಗ್ಗೆ ಸದನದ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಅಬ್ಸರ್ವೇಶನ್ಸ್ ಅಂಡ್ ರೆಕಮೆಂಡೇಶನ್ಸ್ ಪುಟ-49 ರಲ್ಲಿ ಈ ರೀತಿ ಇದೆ.

"The committee is distressed to note the infructuous expenditure of Rs.20.60 lakhs involving foreign exchange out go as a result of non-productionising the collabarated products.

A review of the reasons for such non-productionising indicated that adequate and authentic market survey was not conducted before going in for collaborations the economic ability was not properly assessed and technology colaborated was far from upgraded.